# ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾದಿ

(ಮುದ್ರಣ – 2017)

ಶ್ರೀ ಶಾಂಕರ ತತ್ತ್ವಪ್ರಸಾರ ಅಭಿಯಾನ
ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ
ದಕ್ಷಿಣಾಮ್ನಾಯ ಶ್ರೀಶಾರದಾಪೀಠ, ಶೃಂಗೇರಿ – 577139

Sri Shankaracharya Ashtottara Shatanamaadi (2nd Edition)

**Published &**
**Printed by** : Vidya Bharati Press
(An inhouse publication wing of
Sringeri Sri Sharada Peetham, Karnataka
Ph: 080-23211168)

**First Edition** : November 2015, **Copies :** 60000
**Second Edition :** January 2017, **Copies :** 80000

**Copyright** : Dakshinamnaya Sri Sharada Peetham,Sringeri

**Contribution Value** : ₹ 5/-

**Copies Available at** : Dakshinamnaya Sri Sharada Peetham, Sringeri
**Email** : publications@sringeri.net

# ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಅನುಗ್ರಹ ಸಂದೇಶ

ಭಗವಂತನು ಭಗವದ್ಗೀತೆಯಲ್ಲಿ 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ಎಂಬುದಾಗಿ ಪ್ರತಿಜ್ಞೆಯನ್ನು ಮಾಡಿದ್ದಾನೆ. ಸನಾತನಧರ್ಮವನ್ನು ಕಾಪಾಡುವುದಕ್ಕೂ ಅಧರ್ಮವನ್ನು ನಾಶಮಾಡುವುದಕ್ಕೂ ತಾನು ಪ್ರತಿಯೊಂದು ಯುಗದಲ್ಲೂ ಈ ಭೂಮಿಯಲ್ಲಿ ಅವತರಿಸುತ್ತೇನೆ ಎಂಬುದು ಇದರ ಅರ್ಥ. ಅದರಂತೆಯೇ ಈ ಕಲಿಯುಗದಲ್ಲಿ ಭಗವಂತನು ಶ್ರೀ ಶಂಕರಭಗವತ್ಪಾದರ ರೂಪದಲ್ಲಿ ಅವತರಿಸಿದನು.

ಶ್ರೀ ಶಂಕರಭಗವತ್ಪಾದರು ಅನೇಕ ವಿಧವಾದ ವೇದ ವಿರುದ್ಧ ಮತಗಳನ್ನು ಖಂಡಿಸಿ, ನಮ್ಮ ಸನಾತನವೈದಿಕಧರ್ಮವನ್ನು ಪುನರುಜ್ಜೀವನಗೊಳಿಸಿ ಅದನ್ನು ಎಲ್ಲ ಕಡೆಯೂ ಪ್ರಚಾರಮಾಡಿ ಜನರು ಅದರಲ್ಲಿ ಪ್ರವರ್ತಿಸುವಂತೆ ಮಾಡಿದರು. ಅವರು ಲೋಕಕ್ಕೆ ಮಾಡಿದ ಈ ಉಪಕಾರವು ಅಸಾಧಾರಣವಾದದ್ದು. ಇಂದು ನಾವು ಸ್ವಲ್ಪವಾದರೂ ಧರ್ಮವನ್ನು ಆಚರಿಸುತ್ತ ಅದರಿಂದ ಶ್ರೇಯಸ್ಸನ್ನೂ ಧನ್ಯತಾಭಾವವನ್ನೂ ಪಡೆಯುತ್ತಿದ್ದೇವೆ

ಎಂದರೆ ಅದಕ್ಕೆ ಕಾರಣ ಆ ಮಹಾತ್ಮರು ನಮಗೆ ಮಾಡಿರುವಂತಹ ಉಪಕಾರ. ಹಾಗಾಗಿಯೇ ಶ್ರೀ ಶಂಕರಭಗವತ್ಪಾದರು ಸಮಸ್ತ ಆಸ್ತಿಕಜನರಿಗೆ ಅತ್ಯಂತ ಪೂಜನೀಯರು, ಸದಾಕಾಲ ಸ್ಮರಣೀಯರು ಆಗಿದ್ದಾರೆ. ಅವರನ್ನು ಪೂಜಿಸುವುದು, ಸ್ಮರಿಸುವುದು ನಮ್ಮೆಲ್ಲರ ಶ್ರೇಯಸ್ಸಿಗೆ ಕಾರಣವಾಗುತ್ತದೆ ಎನ್ನುವ ಉದ್ದೇಶದಿಂದ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠಾಧೀಶ್ವರರೂ ನಮ್ಮ ಗುರುವರ್ಯರೂ ಆದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪರಮಾನುಗ್ರಹದಿಂದ “ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ” ಎನ್ನುವ ಭವ್ಯವಾದ ಕಾರ್ಯಕ್ರಮವನ್ನು ರಾಜ್ಯದ ಎಲ್ಲೆಡೆಯಲ್ಲಿಯೂ ಆಯೋಜಿಸಲಾಗಿದೆ. ಶ್ರೀ ಶಂಕರಭಗವತ್ಪಾದರ ನಾಮಗಳನ್ನು ಸಾಮೂಹಿಕವಾಗಿ ಪಾರಾಯಣ ಮಾಡಿ, ಅವರನ್ನು ವಿಶೇಷವಾಗಿ ಆರಾಧಿಸಿ ಅದರಿಂದ ಪ್ರತಿಯೊಬ್ಬ ಆಸ್ತಿಕನು ಶ್ರೇಯಸ್ಸನ್ನು ಪಡೆಯಲಿ, ಲೋಕಕ್ಕೆ ಕಲ್ಯಾಣವುಂಟಾಗಲಿ ಎನ್ನುವುದೇ ಈ ಪಾರಾಯಣದ ಉದ್ದೇಶವಾಗಿದೆ.

ಭಗವಂತನ ನಾಮಗಳಿಗೆ ಅಸಾಧಾರಣವಾದ ಶಕ್ತಿಯಿದೆ. ಅದರಿಂದಲೇ ನಾವು ಭಗವಂತನನ್ನು 24 ನಾಮಗಳಿಂದ, 108 ನಾಮಗಳಿಂದ, ತ್ರಿಶತಿ ನಾಮಗಳಿಂದ, ಸಹಸ್ರನಾಮ ಗಳಿಂದ ಪೂಜಿಸುತ್ತೇವೆ. ಭಗವಂತನ ಒಂದು ನಾಮಕ್ಕೆ ಎಷ್ಟು ಶಕ್ತಿಯಿದೆ ಎನ್ನುವುದು

ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ – ‘ಏಕಸ್ಯ ನಾಮ್ನೋ ಯಾ ಶಕ್ತಿಃ ಪಾತಕಾನಾಂ ನಿವರ್ತನೇ । ತನ್ನಿವರ್ತ್ಯಮಘಂ ಕರ್ತುಂ ನಾಲಂ ಲೋಕಾಶ್ಚತುರ್ದಶ ॥’ ಭಗವಂತನ ಒಂದು ನಾಮವನ್ನು ಉಚ್ಚಾರಣೆ ಮಾಡುವುದರಿಂದ ಎಷ್ಟು ಪಾಪವು ನಾಶವಾಗುತ್ತದೋ, ಅಷ್ಟು ಪಾಪವನ್ನು ಮಾಡುವುದಕ್ಕೆ ಈ ಹದಿನಾಲ್ಕು ಲೋಕಗಳು ಸಾಕಾಗುವುದಿಲ್ಲ. ಅಂದರೆ ಈ ಹದಿನಾಲ್ಕು ಲೋಕಗಳಲ್ಲಿರುವ ಎಲ್ಲರೂ ಸೇರಿ ಎಷ್ಟು ಪಾಪವನ್ನು ಮಾಡುತ್ತಾರೋ ಅದಕ್ಕಿಂತ ಹೆಚ್ಚು ಪಾಪವನ್ನು ಹೋಗಲಾಡಿಸುವ ಶಕ್ತಿ ಭಗವಂತನ ಒಂದು ನಾಮಕ್ಕೆ ಇದೆ.

ಅಂದಮೇಲೆ ಈ ಅಷ್ಟೋತ್ತರ ಶತನಾಮಗಳನ್ನು ನಾವು ಅತ್ಯಂತ ಶ್ರದ್ಧಾಭಕ್ತಿಗಳಿಂದ ಹೇಳಿದರೆ ಅದರಿಂದ ನಮ್ಮ ಪಾಪಗಳೆಲ್ಲ ಕ್ಷಯವಾಗಿ ನಮಗೆ ಶ್ರೇಯಸ್ಸುಂಟಾಗುತ್ತದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಹಾಗಾಗಿ ಇಂತಹ ಪುಣ್ಯಪ್ರದವಾದ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞದಲ್ಲಿ ಪ್ರತಿಯೊಬ್ಬರೂ ಅತ್ಯಂತ ಶ್ರದ್ಧಾಭಕ್ತಿಗಳಿಂದ ಪಾಲ್ಗೊಂಡು ಶ್ರೀ ಶಂಕರಭಗವತ್ಪೂಜ್ಯಪಾದಾಚಾರ್ಯರ ಪರಮಾನುಗ್ರಹದಿಂದ ಶ್ರೇಯೋವಂತರಾಗಿ ಕೃತಾರ್ಥರಾಗಬೇಕೆಂದು ಬಯಸುತ್ತೇವೆ.

# ನಿವೇದನೆ

ಭಗವಂತನ ನಾಮೋಚ್ಚಾರಣೆಯ ಮಹತ್ವವು ಮಹಾಭಾರತದಲ್ಲಿ ಉಲ್ಲೇಖವಾಗಿರುತ್ತದೆ. ಧರ್ಮರಾಜನು ಭೀಷ್ಮರನ್ನು ಕುರಿತು – 'ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ' (ನಿಮ್ಮ ಅಭಿಪ್ರಾಯದಲ್ಲಿ ಎಲ್ಲ ಧರ್ಮಗಳಿಗಿಂತ ಮಿಗಿಲಾದ ಧರ್ಮವು ಯಾವುದು) ಎಂದು ಪ್ರಶ್ನಿಸುತ್ತಾನೆ. 'ಏಷ ಮೇ ಸರ್ವಧರ್ಮಾಣಾಂ ಧರ್ಮಃ ಅಧಿಕತಮೋ ಮತಃ ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಸ್ಸದಾ' (ಭಗವಂತನನ್ನು ಭಕ್ತಿಯಿಂದ ಭಜಿಸುವುದು ಎಲ್ಲ ಧರ್ಮಗಳಿಗಿಂತಲೂ ಬಹಳ ವಿಶೇಷವಾದದ್ದೆಂದು ನನಗೆ ಅನ್ನಿಸುತ್ತದೆ) ಎಂದು ಭೀಷ್ಮರು ಧರ್ಮರಾಜನಿಗೆ ಉಪದೇಶಿಸುತ್ತಾರೆ.

ಭೀಷ್ಮರ ಈ ಮಾತಿನ ತಾತ್ಪರ್ಯವನ್ನು ವಿಷ್ಣುಸಹಸ್ರನಾಮದ ಭಾಷ್ಯದಲ್ಲಿ ಆದಿಶಂಕರರು 'ಭಗವಂತನ ನಾಮೋಚ್ಚಾರಣೆ ಎಂಬ ಈ ಧರ್ಮವನ್ನು ಆಚರಿಸಲು ಪ್ರತಿಯೊಬ್ಬ ಮನುಷ್ಯನಿಂದಲು ಸಾಧ್ಯವಾಗಿರುವುದೇ ಇದರ ವೈಶಿಷ್ಟ್ಯ' ಎಂಬುದಾಗಿ ಪ್ರತಿಪಾದಿಸಿರುತ್ತಾರೆ. ಈ ನಾಮೋಚ್ಚಾರಣೆಯಿಂದ ಮನುಷ್ಯನು ಅತ್ಯಂತ ಸುಲಭವಾಗಿ ತನ್ನ ಸರ್ವಪಾಪಗಳನ್ನು ಕಳೆದುಕೊಳ್ಳಬಹುದು ಹಾಗೂ ಈ ಮಾರ್ಗಕ್ಕೆ ಪ್ರತಿಯೊಬ್ಬರೂ ಅರ್ಹರಾಗಿರುತ್ತಾರೆ.

8ನೆಯ ಶತಮಾನದಲ್ಲಿ ಸನಾತನಧರ್ಮಕ್ಕೆ ಚ್ಯುತಿಬಂದಂತಹ ಸಂದರ್ಭದಲ್ಲಿ ಈ ಧರ್ಮವನ್ನು ಭಗವಂತನು ಆದಿಶಂಕರರ ರೂಪದಲ್ಲಿ ಅವತಾರ ಮಾಡಿ ಧರ್ಮವನ್ನು

ಕಾಪಾಡಿರುತ್ತಾನೆ. ಅಂತಹ ಆದಿಶಂಕರಾಚಾರ್ಯರ ಅಷ್ಟೋತ್ತರ ಶತನಾಮದ ಪಾರಾಯಣ ಪಾಪಹಾರಕವೆಂಬುದರಲ್ಲಿ ಸಂಶಯವಿಲ್ಲ. ಈ ಉದ್ದೇಶದಿಂದಲೇ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ದಿವ್ಯಾನುಗ್ರಹದೊಂದಿಗೆ ಶ್ರೀಶಾಂಕರ ತತ್ತ್ವಪ್ರಸಾರ ಅಭಿಯಾನವು 'ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ'ವನ್ನು ನಾಡಿನಾದ್ಯಂತ ಆಯೋಜಿಸಿರುತ್ತದೆ.

ಪ್ರತಿಯೊಬ್ಬರೂ ಈ ಯಜ್ಞದಲ್ಲಿ ಪಾಲ್ಗೊಂಡು ಭಗವಂತನ ನಾಮಜಪವನ್ನು ಮಾಡುವುದರ ಮೂಲಕ ಭಗವತ್ಕೃಪೆಗೆ ಪಾತ್ರರಾಗಬೇಕೆನ್ನುವುದು ನಮ್ಮ ಅಪೇಕ್ಷೆ. ಪಾರಾಯಣಕ್ಕೆ ಅವಶ್ಯವಾಗಿರುವ ಸ್ತೋತ್ರಗಳು ಹಾಗೂ ಅಷ್ಟೋತ್ತರ ಶತನಾಮಾವಳಿಯನ್ನು ಒಳಗೊಂಡ ಈ ಪುಸ್ತಕವು ತಮಗೆ ಸಹಕಾರಿಯಾಗಿರುತ್ತದೆ. ಇದರ ಮುದ್ರಣಕ್ಕೆ ಸಹಕರಿಸಿದ ಪ್ರತಿಯೊಬ್ಬರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಗುರುಸೇವಾಧುರೀಣ
ಡಾ|| ವಿ. ಆರ್. ಗೌರೀಶಂಕರ್
ಆಡಳಿತಾಧಿಕಾರಿಗಳು
ಶ್ರೀಶಾರದಾಪೀಠ, ಶೃಂಗೇರಿ

# ದ್ವಿತೀಯ ಮುದ್ರಣ ಕುರಿತು

ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಹಾಗೂ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ ಮತ್ತು ಅಭಿಯಾನದ ಕಾರ್ಯಕರ್ತರ ಪರಿಶ್ರಮದಿಂದ ಕಳೆದ ವರ್ಷ ರಾಜ್ಯಾದ್ಯಂತ ಶ್ರೀ **ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಯಜ್ಞ**ವನ್ನು ಸಂಪನ್ನಗೊಳಿಸಿದ್ದೇವೆ. ಸ್ವತಃ ಜಗದ್ಗುರುಗಳವರು ಯಜ್ಞದ ಸಮಾರೋಪ ಸಮಾರಂಭದ (29.05.2016) ಅನುಗ್ರಹಭಾಷಣದಲ್ಲಿ – 'ಈ ಪಾರಾಯಣ ಯಜ್ಞವು ಭಗವತ್ಪಾದರಿಗೆ ಅತ್ಯಂತ ತೃಪ್ತಿಕರವಾಗಿ ನೆರವೇರಿತು' ಎಂದು ಹೇಳಿರುವುದೇ ಯಜ್ಞದ ಸಾಫಲ್ಯಕ್ಕೆ ಸಾಕ್ಷಿಯಾಗಿದೆ.

'ಶ್ರೀ ಶಾರದಾ ಶಂಕರ ಭಕ್ತಮಂಡಲಿ' ಹೆಸರಿನಲ್ಲಿ ಪಾರಾಯಣವು ನಿರಂತರವಾಗಿ ನಡೆಯುತ್ತಿರಬೇಕು ಎಂಬ ದೃಷ್ಟಿಯಿಂದ ಈ ಯಜ್ಞವನ್ನು ಮುಂದುವರೆಸುತ್ತಿದ್ದು, ಕೆಲವು ಬದಲಾವಣೆಗಳೊಂದಿಗೆ '**ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾದಿ**' ಇದರ ದ್ವಿತೀಯ ಮುದ್ರಣವನ್ನು ಹೊರತರುತ್ತಿದ್ದೇವೆ. ಈ ಮುದ್ರಣಕ್ಕೆ ನೆರವಾದ ಎಲ್ಲರನ್ನು ಸ್ಮರಿಸುತ್ತ, ರಾಜ್ಯದ ಜನತೆ ಈ ಪಾರಾಯಣದಲ್ಲಿ ಪಾಲ್ಗೊಂಡು ಆದಿಶಂಕರರ ಕೃಪೆಗೆ ಹಾಗೂ ಗುರುಗಳವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಬಯಸುತ್ತೇನೆ.

ಗುರುಸೇವಾಧುರೀಣ
ಡಾ॥ ವಿ. ಆರ್. ಗೌರೀಶಂಕರ್
ಆಡಳಿತಾಧಿಕಾರಿಗಳು
ಶ್ರೀಶಾರದಾಪೀಠ, ಶೃಂಗೇರಿ

# ಏಕಶ್ಲೋಕೀ

ಕಿಂ ಜ್ಯೋತಿಸ್ತವ ಭಾನುಮಾನಹನಿ ಮೇ ರಾತ್ರೌ ಪ್ರದೀಪಾದಿಕಂ
ಸ್ಯಾದೇವಂ ರವಿದೀಪದರ್ಶನವಿಧೌ ಕಿಂ ಜ್ಯೋತಿರಾಖ್ಯಾಹಿ ಮೇ ।
ಚಕ್ಷುಸ್ತಸ್ಯ ನಿಮೀಲನಾದಿಸಮಯೇ ಕಿಂ ಧೀರ್ಧಿಯೋ ದರ್ಶನೇ
ಕಿಂ ತತ್ರಾಹಮತೋ ಭವಾನ್ ಪರಮಕಂ ಜ್ಯೋತಿಸ್ತದಸ್ಮಿ ಪ್ರಭೋ ॥

# ಶ್ರೀಗುರುವಂದನ

ಶಂಕಾರೂಪೇಣ ಮಚ್ಚಿತ್ತಂ ಪಂಕೀಕೃತಮಭೂದ್ಯಯಾ ।
ಕಿಂಕರೀ ಯಸ್ಯ ಸಾ ಮಾಯಾ ಶಂಕರಾಚಾರ್ಯಮಾಶ್ರಯೇ ॥ 1 ॥

ಪ್ರಹ್ಲಾದವರದೋ ದೇವೋ ಯೋ ನೃಸಿಂಹಃ ಪರೋ ಹರಿಃ ।
ನೃಸಿಂಹೋಪಾಸಕಂ ನಿತ್ಯಂ ತಂ ನೃಸಿಂಹಗುರುಂ ಭಜೇ ॥ 2 ॥

ಶ್ರೀಸಚ್ಚಿದಾನಂದ ಶಿವಾಭಿನವ್ಯನೃಸಿಂಹಭಾರತ್ಯಭಿಧಾನ್ ಯತೀಂದ್ರಾನ್ ।
ವಿದ್ಯಾನಿಧೀನ್ ಮಂತ್ರನಿಧೀನ್ ಸದಾತ್ಮನಿಷ್ಠಾನ್ ಭಜೇ
ಮಾನವಶಂಭುರೂಪಾನ್ ॥ 3 ॥

ಸದಾತ್ಮಧ್ಯಾನನಿರತಂ ವಿಷಯೇಭ್ಯಃ ಪರಾಙ್ಮುಖಮ್ ।
ನೌಮಿ ಶಾಸ್ತ್ರೇಷು ನಿಷ್ಣಾತಂ ಚಂದ್ರಶೇಖರಭಾರತೀಮ್ ॥ 4 ॥

ವಿವೇಕಿನಂ ಮಹಾಪ್ರಜ್ಞಂ ಧೈರ್ಯೌದಾರ್ಯಕ್ಷಮಾನಿಧಿಮ್ ।
ಸದಾಭಿನವಪೂರ್ವಂ ತಂ ವಿದ್ಯಾತೀರ್ಥಗುರುಂ ಭಜೇ ॥ 5 ॥

ಅಜ್ಞಾನಾಂ ಜಾಹ್ನವೀತೀರ್ಥಂ ವಿದ್ಯಾತೀರ್ಥಂ ವಿವೇಕಿನಾಮ್ ।
ಸರ್ವೇಷಾಂ ಸುಖದಂ ತೀರ್ಥಂ ಭಾರತೀತೀರ್ಥಮಾಶ್ರಯೇ ॥ 6 ॥

ವಿದ್ಯಾವಿನಯಸಂಪನ್ನಂ ವೀತರಾಗಂ ವಿವೇಕಿನಮ್ ।
ವಂದೇ ವೇದಾಂತತತ್ತ್ವಜ್ಞಂ ವಿಧುಶೇಖರಭಾರತೀಮ್ ॥ 7 ॥

# ಬಿರುದಾವಳಿ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ–

ಪದವಾಕ್ಯಪ್ರಮಾಣಪಾರಾವಾರಪಾರೀಣ–ಯಮನಿಯಮಾಸನ-

ಪ್ರಾಣಾಯಾಮಪ್ರತ್ಯಾಹಾರಧಾರಣಾಧ್ಯಾನಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ–

ತಪಶ್ಚಕ್ರವರ್ತಿ–ಅನಾದ್ಯವಿಚ್ಛಿನ್ನಶ್ರೀಶಂಕರಾಚಾರ್ಯಗುರುಪರಂಪರಾಪ್ರಾಪ್ತ–

ಷಡ್ದರ್ಶನಸ್ಥಾಪನಾಚಾರ್ಯ–ವ್ಯಾಖ್ಯಾನಸಿಂಹಾಸನಾಧೀಶ್ವರ–

ಸಕಲನಿಗಮಾಗಮಸಾರಹೃದಯ–

ಸಾಂಖ್ಯತ್ರಯಪ್ರತಿಪಾದಕ–ವೈದಿಕಮಾರ್ಗಪ್ರವರ್ತಕ–ಸರ್ವತಂತ್ರಸ್ವತಂತ್ರ–

ಆದಿರಾಜಧಾನೀ–ವಿದ್ಯಾನಗರಮಹಾರಾಜಧಾನೀ–

ಕರ್ಣಾಟಕಸಿಂಹಾಸನಪ್ರತಿಷ್ಠಾಪನಾಚಾರ್ಯ–ಶ್ರೀಮದ್ರಾಜಾಧಿರಾಜಗುರು–
ಭೂಮಂಡಲಾಚಾರ್ಯ–ಋಷ್ಯಶೃಂಗಪುರವರಾಧೀಶ್ವರ–
ತುಂಗಭದ್ರಾತೀರವಾಸಿ–ಶ್ರೀಮದ್ವಿದ್ಯಾಶಂಕರಪಾದಪದ್ಮಾರಾಧಕ–
ಶ್ರೀಮಜ್ಜಗದ್ಗುರು–ಶ್ರೀಮದಭಿನವವಿದ್ಯಾತೀರ್ಥಮಹಾಸ್ವಾಮಿಗುರುಕರಕಮಲಸಂಜಾತ–
ಶ್ರೀಮಜ್ಜಗದ್ಗುರು–ಶ್ರೀಭಾರತೀತೀರ್ಥಮಹಾಸ್ವಾಮಿನಾಂ ತತ್ಕರಕಮಲಸಂಜಾತ–
ಶ್ರೀಮಜ್ಜಗದ್ಗುರು–ಶ್ರೀವಿಧುಶೇಖರಭಾರತೀ–ಮಹಾಸ್ವಾಮಿನಾಂಚ
ಚರಣಾರವಿಂದಯೋಃ ಸಾಷ್ಟಾಂಗಪ್ರಣಾಮಾನ್ ಸಮರ್ಪಯಾಮಃ ॥

# ಗಣೇಶಸ್ತುತಿ

ಅದ್ವೈತಮೇವ ಪರಮಾರ್ಥತಯಾ ವಿವೇಕ್ತುಮ್
ಅಂಗೀಕೃತದ್ವಿಪನರಾಕೃತಿಸನ್ನಿವೇಶಃ ।
ಅದ್ವೈತಗೋಚರಮಶೇಷವಿಶೇಷಮಂತಃ
ಆವಿಷ್ಕರೋತು ವರದೋ ಮಮ ವಿಘ್ನರಾಜಃ ॥

# ಶ್ರೀ ಶಾರದಾ ಗೀತೆ

ಶಾರದೇ ಕರುಣಾನಿಧೇ ಸಕಲಾನವಾಂಬ ಸದಾ ಜನಾನ್ ।
ಚಾರಣಾದಿಮ ಗೀತ ವೈಭವ ಪೂರಿತಾಖಿಲ ದಿಕ್ತತೇ ॥ ಪ ॥

ಭರ್ಮ ಭೂಷಣ ಭೂಷಿತೇ ವರರತ್ನ ಮೌಲಿ ವಿರಾಜಿತೇ ।
ಶರ್ಮದಾಯಿನಿ ಕರ್ಮಮೋಚನಿ ನಿರ್ಮಲಂ ಕುರು ಮಾನಸಂ ॥ 1 ॥

ಹಸ್ತ ಸಂಧೃತ ಪುಸ್ತಕಾಕ್ಷಪಟೀ ಸುಧಾ ಘಟ ಮುದ್ರಿಕೇ ।
ಕಸ್ತವಾಸ್ತಿ ಹಿ ವರ್ಣನೇ ಚತುರೋ ನರಃ ಖಚರೋಽಥವಾ ॥ 2 ॥

# ಶ್ರೀ ಶಂಕರಾಚಾರ್ಯ ಸ್ತವ

ಶ್ರೀಶಂಕರಾಚಾರ್ಯವರ್ಯಂ
ಸರ್ವಲೋಕೈಕವಂದ್ಯಂ ಭಜೇ ದೇಶಿಕೇಂದ್ರಂ ॥ ಪ ॥

ಧರ್ಮಪ್ರಚಾರೇಽತಿದಕ್ಷಂ
ಯೋಗಿಗೋವಿಂದಪಾದಾಪ್ತಸನ್ಯಾಸದೀಕ್ಷಂ ।
ದುರ್ವಾದಿಗರ್ವಾಪನೋದಂ
ಪದ್ಮಪಾದಾದಿಶಿಷ್ಯಾಲಿಸಂಸೇವ್ಯಪಾದಂ ॥ 1 ॥

ಶಂಕಾದ್ರಿದಂಭೋಲಿಲೀಲಂ
ಕಿಂಕರಾಶೇಷಶಿಷ್ಯಾಲಿ ಸಂತ್ರಾಣಶೀಲಂ ।
ಬಾಲಾರ್ಕನೀಕಾಶಚೇಲಂ
ಬೋಧಿತಾಶೇಷವೇದಾಂತ ಗೂಢಾರ್ಥಜಾಲಂ ॥ 2 ॥

ರುದ್ರಾಕ್ಷಮಾಲಾವಿಭೂಷಂ
    ಚಂದ್ರಮೌಲೀಶ್ವರಾರಾಧನಾವಾಪ್ತತೋಷಂ ।
ವಿದ್ರಾವಿತಾಶೇಷದೋಷಂ
    ಭದ್ರಪೂಗಪ್ರದಂ ಭಕ್ತಲೋಕಸ್ಯ ನಿತ್ಯಂ ॥ 3 ॥

ಪಾಪಾಟವೀಚಿತ್ರಭಾನುಂ
    ಜ್ಞಾನದೀಪೇನ ಹಾರ್ದಂ ತಮೋ ವಾರಯಂತಂ ।
ದ್ವೈಪಾಯನಪ್ರೀತಿಭಾಜಂ
    ಸರ್ವತಾಪಾಪಹಾಮೋಘಬೋಧಪ್ರದಂ ತಂ ॥ 4 ॥

ರಾಜಾಧಿರಾಜಾಭಿಪೂಜ್ಯಂ
    ರಮ್ಯಶೃಂಗಾದ್ರಿವಾಸೈಕಲೋಲಂ ಯತೀಡ್ಯಂ ।
ರಾಕೇಂದುಸಂಕಾಶವಕ್ತ್ರಂ
    ರತ್ನಗರ್ಭೇಭವಕ್ತ್ರಾಂಘ್ರಿಪೂಜಾನುರಕ್ತಂ ॥ 5 ॥

ಶ್ರೀಭಾರತೀತೀರ್ಥಗೀತಂ
ಶಂಕರಾರ್ಯಸ್ತವಂ ಯಃ ಪಠೇದ್ಭಕ್ತಿಯುಕ್ತಃ ।
ಸೋऽವಾಪ್ನುಯಾತ್ಸರ್ವಮಿಷ್ಟಂ
ಶಂಕರಾಚಾರ್ಯವರ್ಯಪ್ರಸಾದೇನ ತೂರ್ಣಂ ॥ 6 ॥

# ಸಂಕಲ್ಪ

ಮಮೋಪಾತ್ತ–ಸಮಸ್ತ–ದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ
ಸರ್ವೇಷಾಂ ಆಸ್ತಿಕಮಹಾಜನಾನಾಂ ಕ್ಷೇಮಸ್ಥೈರ್ಯ–ವೀರ್ಯವಿಜಯ–ಅಭಯ–
ಆಯುರಾರೋಗ್ಯ–ಐಶ್ವರ್ಯಾಭಿವೃದ್ಧ್ಯರ್ಥಂ, ಸಮಸ್ತ–ದುರಿತೋಪಶಾಂತ್ಯರ್ಥಂ,
ಸಮಸ್ತ–ಮಂಗಲಾವಾಪ್ತ್ಯರ್ಥಂ, ಸಮಸ್ತ–ಅಭ್ಯುದಯಾರ್ಥಂ ಚ,
ಧರ್ಮಾರ್ಥ–ಕಾಮಮೋಕ್ಷಾಖ್ಯ–ಚತುರ್ವಿಧಪುರುಷಾರ್ಥಸಿದ್ಧ್ಯರ್ಥಂ,
ಶ್ರೀಮಚ್ಛಂಕರಭಗವತ್ಪಾದಾಚಾರ್ಯಾಖ್ಯ–ಸದ್ಗುರುಪ್ರಸಾದಸಿದ್ಧ್ಯರ್ಥಂ,
ಶ್ರೀಸದ್ಗುರುಪ್ರಸಾದೇನ ಸರ್ವೇಷಾಂ ಆಸ್ತಿಕಮಹಾಜನಾನಾಂ ಸದ್ವಿದ್ಯಾ–
ಸದ್ಬುದ್ಧಿಪ್ರಾಪ್ತ್ಯರ್ಥಂ, ಚಿತ್ತಶಾಂತಿ–ಸುಖಸಂತೋಷಾದ್ಯಭಿವೃದ್ಧ್ಯರ್ಥಂ,
ದೇಶೋಪಪ್ಲವನಿವೃತ್ತ್ಯರ್ಥಂ, ಶ್ರೀಮಚ್ಛಂಕರಭಗವತ್ಪಾದಾಚಾರ್ಯ–ಪ್ರೀತ್ಯರ್ಥಂ
ಶ್ರೀಮಚ್ಛಂಕರಭಗವತ್ಪಾದಾಚಾರ್ಯ–ಅಷ್ಟೋತ್ತರ–ಶತನಾಮ–ಪಾರಾಯಣಂ ಕರಿಷ್ಯೇ ॥

# ಶ್ರೀಶಂಕರ ಭಗವತ್ಪಾದಾಚಾರ್ಯ
# ಅಷ್ಟೋತ್ತರ ಶತನಾಮಾವಳಿ

ಶ್ರೀಶಂಕರಾಚಾರ್ಯವರ್ಯಾಯ ನಮಃ

ಬ್ರಹ್ಮಾನಂದಪ್ರದಾಯಕಾಯ ನಮಃ

ಅಜ್ಞಾನತಿಮಿರಾದಿತ್ಯಾಯ ನಮಃ

ಸುಜ್ಞಾನಾಂಬುಧಿಚಂದ್ರಮಸೇ ನಮಃ

ವರ್ಣಾಶ್ರಮಪ್ರತಿಷ್ಠಾತ್ರೇ ನಮಃ 5

ಶ್ರೀಮತೇ ನಮಃ

ಮುಕ್ತಿಪ್ರದಾಯಕಾಯ ನಮಃ

ಶಿಷ್ಯೋಪದೇಶನಿರತಾಯ ನಮಃ

ಭಕ್ತಾಭೀಷ್ಟಪ್ರದಾಯಕಾಯ ನಮಃ

ಸೂಕ್ಷ್ಮತತ್ತ್ವರಹಸ್ಯಜ್ಞಾಯ ನಮಃ 10

ಕಾರ್ಯಾಕಾರ್ಯಪ್ರಬೋಧಕಾಯ ನಮಃ

ಜ್ಞಾನಮುದ್ರಾಂಚಿತಕರಾಯ ನಮಃ

ಶಿಷ್ಯಹೃತ್ತಾಪಹಾರಕಾಯ ನಮಃ

ಪರಿವ್ರಾಜಾಶ್ರಮೋದ್ಧರ್ತ್ರೇ ನಮಃ

ಸರ್ವತಂತ್ರಸ್ವತಂತ್ರಧಿಯೇ ನಮಃ 15

ಅದ್ವೈತಸ್ಥಾಪನಾಚಾರ್ಯಾಯ ನಮಃ

ಸಾಕ್ಷಾಚ್ಛಂಕರರೂಪಧೃತೇ ನಮಃ

ಷಣ್ಮತಸ್ಥಾಪನಾಚಾರ್ಯಾಯ ನಮಃ

ತ್ರಯೀಮಾರ್ಗಪ್ರಕಾಶಕಾಯ ನಮಃ

ವೇದವೇದಾಂತತತ್ತ್ವಜ್ಞಾಯ ನಮಃ 20

ದುರ್ವಾದಿಮತಖಂಡನಾಯ ನಮಃ

ವೈರಾಗ್ಯನಿರತಾಯ ನಮಃ

ಶಾಂತಾಯ ನಮಃ

ಸಂಸಾರಾರ್ಣವತಾರಕಾಯ ನಮಃ

ಪ್ರಸನ್ನವದನಾಂಭೋಜಾಯ ನಮಃ 25

ಪರಮಾರ್ಥಪ್ರಕಾಶಕಾಯ ನಮಃ

ಪುರಾಣಸ್ಮೃತಿಸಾರಜ್ಞಾಯ ನಮಃ

ನಿತ್ಯತೃಪ್ತಾಯ ನಮಃ

ಮಹತೇ ನಮಃ

ಶುಚಯೇ ನಮಃ 30

ನಿತ್ಯಾನಂದಾಯ ನಮಃ

ನಿರಾತಂಕಾಯ ನಮಃ

ನಿಸ್ಸಂಗಾಯ ನಮಃ

ನಿರ್ಮಲಾತ್ಮಕಾಯ ನಮಃ

ನಿರ್ಮಮಾಯ ನಮಃ 35

ನಿರಹಂಕಾರಾಯ ನಮಃ

ವಿಶ್ವವಂದ್ಯಪದಾಂಬುಜಾಯ ನಮಃ

ಸತ್ತ್ವಪ್ರಧಾನಾಯ ನಮಃ

ಸದ್ಭಾವಾಯ ನಮಃ

ಸಂಖ್ಯಾತೀತಗುಣೋಜ್ಜ್ವಲಾಯ ನಮಃ 40

ಅನಘಾಯ ನಮಃ

ಸಾರಹೃದಯಾಯ ನಮಃ

ಸುಧಿಯೇ ನಮಃ

ಸಾರಸ್ವತಪ್ರದಾಯ ನಮಃ

ಸತ್ಯಾತ್ಮನೇ ನಮಃ 45

ಪುಣ್ಯಶೀಲಾಯ ನಮಃ

ಸಾಂಖ್ಯಯೋಗವಿಚಕ್ಷಣಾಯ ನಮಃ

ತಪೋರಾಶಯೇ ನಮಃ

ಮಹಾತೇಜಸೇ ನಮಃ

ಗುಣತ್ರಯವಿಭಾಗವಿದೇ ನಮಃ 50

ಕಲಿಘ್ನಾಯ ನಮಃ

ಕಾಲಕರ್ಮಜ್ಞಾಯ ನಮಃ

ತಮೋಗುಣನಿವಾರಕಾಯ ನಮಃ

ಭಗವತೇ ನಮಃ

ಭಾರತೀಜೇತ್ರೇ ನಮಃ 55

ಶಾರದಾಹ್ವಾನಪಂಡಿತಾಯ ನಮಃ

ಧರ್ಮಾರ್ಧರ್ಮವಿಭಾಗಜ್ಞಾಯ ನಮಃ

ಲಕ್ಷ್ಯಭೇದಪ್ರದರ್ಶಕಾಯ ನಮಃ

ನಾದಬಿಂದುಕಲಾಭಿಜ್ಞಾಯ ನಮಃ

ಯೋಗಿಹೃತ್ಪದ್ಮಭಾಸ್ಕರಾಯ ನಮಃ **60**

ಅತೀಂದ್ರಿಯಜ್ಞಾನನಿಧಯೇ ನಮಃ

ನಿತ್ಯಾನಿತ್ಯವಿವೇಕವತೇ ನಮಃ

ಚಿದಾನಂದಾಯ ನಮಃ

ಚಿನ್ಮಯಾತ್ಮನೇ ನಮಃ

ಪರಕಾಯಪ್ರವೇಶಕೃತೇ ನಮಃ 65

ಅಮಾನುಷಚರಿತ್ರಾಢ್ಯಾಯ ನಮಃ

ಕ್ಷೇಮದಾಯಿನೇ ನಮಃ

ಕ್ಷಮಾಕರಾಯ ನಮಃ

ಭವ್ಯಾಯ ನಮಃ

ಭದ್ರಪ್ರದಾಯ ನಮಃ 70

ಭೂರಿಮಹಿಮ್ನೇ ನಮಃ

ವಿಶ್ವರಂಜಕಾಯ ನಮಃ

ಸ್ವಪ್ರಕಾಶಾಯ ನಮಃ

ಸದಾಧಾರಾಯ ನಮಃ

ವಿಶ್ವಬಂಧವೇ ನಮಃ 75

ಶುಭೋದಯಾಯ ನಮಃ

ವಿಶಾಲಕೀರ್ತಯೇ ನಮಃ

ವಾಗೀಶಾಯ ನಮಃ

ಸರ್ವಲೋಕಹಿತೋತ್ಸುಕಾಯ ನಮಃ

ಕೈಲಾಸಯಾತ್ರಾ–ಸಂಪ್ರಾಪ್ತ–ಚಂದ್ರಮೌಲಿ–ಪ್ರಪೂಜಕಾಯ ನಮಃ

ಕಾಂಚ್ಯಾಂ ಶ್ರೀಚಕ್ರರಾಜಾಖ್ಯ–ಯಂತ್ರಸ್ಥಾಪನ–ದೀಕ್ಷಿತಾಯ ನಮಃ

ಶ್ರೀಚಕ್ರಾತ್ಮಕ–ತಾಟಂಕ–ತೋಷಿತಾಂಬಾ–ಮನೋರಥಾಯ ನಮಃ

ಶ್ರೀಬ್ರಹ್ಮಸೂತ್ರೋಪನಿಷದ್ಭಾಷ್ಯಾದಿ–ಗ್ರಂಥಕಲ್ಪಕಾಯ ನಮಃ

ಚತುರ್ದಿಕ್ಚತುರಾಮ್ನಾಯ ಪ್ರತಿಷ್ಠಾತ್ರೇ ನಮಃ

ಮಹಾಮತಯೇ ನಮಃ 85

ದ್ವಿಸಪ್ತತಿಮತೋಚ್ಛೇತ್ರೇ ನಮಃ

ಸರ್ವದಿಗ್ವಿಜಯಪ್ರಭವೇ ನಮಃ

ಕಾಷಾಯವಸನೋಪೇತಾಯ ನಮಃ

ಭಸ್ಮೋದ್ಧೂಲಿತವಿಗ್ರಹಾಯ ನಮಃ

ಜ್ಞಾನಾತ್ಮಕೈಕದಂಡಾಢ್ಯಾಯ ನಮಃ 90

ಕಮಂಡಲುಲಸತ್ಕರಾಯ ನಮಃ

ಗುರುಭೂಮಂಡಲಾಚಾರ್ಯಾಯ ನಮಃ

ಭಗವತ್ಪಾದಸಂಜ್ಞಕಾಯ ನಮಃ

ವ್ಯಾಸಸಂದರ್ಶನಪ್ರೀತಾಯ ನಮಃ

ಋಷ್ಯಶೃಂಗಪುರೇಶ್ವರಾಯ ನಮಃ 95

ಸೌಂದರ್ಯಲಹರೀಮುಖ್ಯ-ಬಹುಸ್ತೋತ್ರ-ವಿಧಾಯಕಾಯ ನಮಃ

ಚತುಷ್ಷಷ್ಟಿಕಲಾಭಿಜ್ಞಾಯ ನಮಃ

ಬ್ರಹ್ಮರಾಕ್ಷಸಮೋಕ್ಷದಾಯ ನಮಃ

ಶ್ರೀಮನ್ಮಂಡನಮಿಶ್ರಾಖ್ಯ-ಸ್ವಯಂಭೂಜಯ-ಸನ್ನುತಾಯ ನಮಃ

ತೋಟಕಾಚಾರ್ಯಸಂಪೂಜ್ಯಾಯ ನಮಃ 100

ಪದ್ಮಪಾದಾರ್ಚಿತಾಂಘ್ರಿಕಾಯ ನಮಃ

ಹಸ್ತಾಮಲಕ-ಯೋಗೀಂದ್ರ-ಬ್ರಹ್ಮಜ್ಞಾನ-ಪ್ರದಾಯಕಾಯ ನಮಃ

ಸುರೇಶ್ವರಾಖ್ಯ-ಸಚ್ಛಿಷ್ಯ-ಸನ್ನ್ಯಾಸಾಶ್ರಮದಾಯಕಾಯ ನಮಃ

ನೃಸಿಂಹಭಕ್ತಾಯ ನಮಃ

ಸದ್ರತ್ನಗರ್ಭಹೇರಂಬ–ಪೂಜಕಾಯ ನಮಃ

ವ್ಯಾಖ್ಯಾಸಿಂಹಾಸನಾಧೀಶಾಯ ನಮಃ

ಜಗತ್ಪೂಜ್ಯಾಯ ನಮಃ

ಜಗದ್ಗುರವೇ ನಮಃ 108

ಶ್ರೀಮಚ್ಛಂಕರಭಗವತ್ಪಾದಾಚಾರ್ಯಸ್ವಾಮಿನೇ ನಮಃ

# ತತ್ತ್ವಪದ

ಸುಮ್ಮನೆ ಬ್ರಹ್ಮವಾಗುವನೇ । ಮೂಲ ಹಮ್ಮೆಲ್ಲಾ ಲಯವಾಗಿ ಉಳಿಯದೆ ತಾನೇ ॥
ತಾನುಳಿಯದೆ ತಾನೇ ॥ ಸುಮ್ಮನೆ...

ಸುಮ್ಮನಿದ್ದರು ಸುಖಿಸುವನೆ । ಇದು ನಮ್ಮದೆಂಬುದನು । ಕೊಂದಿರುವೊ ಸಾಹಸನೆ ।
ಹೊಂದಿರುವೋ ಚಿದ್ರಸನೆ । ಸಮ್ಮಾನವನು ಮೀರಿದವನೆ । ಮೃತ್ಯು ಸಂಹಾರಿಯಾಗಿ
ತಾಂಡವದೊಳಿರುವನೇ ಕುಂಡಲಿಯ ಮೀರುವನೇ ॥ ಸುಮ್ಮನೆ ॥

ಪುಸ್ತಕವನು ಮುಚ್ಚಲಿಲ್ಲ । ತಾನಾ ಪುಸ್ತಕದೊಳಗೆಲ್ಲಾ ।
ಶಿವನಾಗಲಿಲ್ಲ ಕೇಶವನಾಗಲಿಲ್ಲಾ । ಸುಸ್ತುಗಳ್ ಬಯಲಾಗಲಿಲ್ಲ । ಪರವಸ್ತುವೆಂಬುವ
ನುಡಿಯೊಳಗಾಗಲಿಲ್ಲ । ತನ್ನೊಳಗಾಗಲಿಲ್ಲ ॥ ಸುಮ್ಮನೆ ॥

ಮರಣಭೀತಿಯ ಬೇರ ಸುಡದೆ । ತನ್ನ । ಪರಮಾನಂದವನೇ ಎಲ್ಲೆಲ್ಲಿಯುಂ ನೆಡದೆ ।
ಎಲ್ಲೆಲ್ಲಿಯುಂ ನೆಡದೆ । ಶರೀರದೊಳಭಿಮಾನ ಬಿಡದೆ ।
ನಮ್ಮ ಗುರುಶಂಕರನಿಗೆ ಚಿತ್ತವನು ಒಪ್ಪಿಸದೆ ವಿತ್ತವನು ಒಪ್ಪಿಸದೆ ॥ ಸುಮ್ಮನೆ ॥

# ಶ್ರೀಮಜ್ಜಗದ್ಗುರು ಶಂಕರಾಚಾರ್ಯರ ಆರತಿ

ಜಯ ಭಗವನ್ ಜಯ ಶಂಕರ ವಿದ್ಯಾಕಲ್ಪತರೋ ।
ನಿರ್ಮಥಿತಶ್ರುತಿಸಾಗರ ಜಯ ಜಯ ಭುವನಗುರೋ ॥
ಜಯ ದೇವ ಜಯದೇವ ॥

ಧರ್ಮಸ್ಥಾಪನಹೇತೋರ್ಲೀಲಾತನುಧಾರಿನ್
ಲೋಕಾನುಗ್ರಹಹೇತೋರ್ಬ್ರಹ್ಮಣಿ ಸಂನ್ಯಾಸಿನ್ ।
ಕಲ್ಯುದ್ಭವನಾನಾವಿಧಪಾಖಂಡಧ್ವಂಸಿನ್
ಅದ್ವೈತಾಮೃತವೃಷ್ಟ್ಯಾ ಜಡಜೀವೋದ್ಧಾರಿನ್ ॥ 1 ॥

ಶ್ರುತಿಶಿರಸಸ್ತತ್ತ್ವಾನಾಮೇಕಸ್ತ್ವಂ ವೇತ್ತಾ
ಪರಪಕ್ಷಾಣಾಂ ಪವಿರಿವ ವಿದಿತಸ್ತ್ವಂ ಭೇತ್ತಾ ।
ಸಂಶೀತೇರ್ಯುಕ್ತಿಬಲಾದೇಕಸ್ತ್ವಂ ಛೇತ್ತಾ
ತ್ವದ್ಭಾಷ್ಯಾಮೃತಪುಷ್ಟಃ ಕೋ ನು ಜನಃ ಖೇತ್ತಾ ॥ 2 ॥

ಶಾರದಯಾಪಿ ನುತಂ ತ್ವಾಂ ಸ್ತೋತುಮಲಂ ಕೋಽಹಮ್
ಮರ್ಷಯ ಮೇ ತ್ವಸಮಂಜಸಮಕ್ಷರಸಂದೋಹಮ್ ।
ಸ್ಪರ್ಶಮಣೇ ಸ್ವರ್ಣೀಕುರು ಮಾಂ ಮಲಿನಂ ಲೋಹಮ್
ಸ್ಥಿತ್ವಾ ಮೇ ಹೃದ್ಯನಿಶಂ ವಾರಯ ಮಮ ಮೋಹಮ್ ॥ 3 ॥

ತ್ವಚ್ಚರಿತಾನುಧ್ಯಾನಾದಾಚಾರೇ ಶುದ್ಧಿಮ್
ತ್ವದ್ಭಾಷ್ಯಶ್ರವಣಾದಪ್ಯನಘಾಮಿಹ ಬುದ್ಧಿಮ್ ।
ವಿಂದೇಮ ತ್ವನ್ಮಾರ್ಗಾಶ್ರಯಣಾತ್ ಪುಣ್ಯರ್ದ್ಧಿಮ್
ದೇಹಿ ಗುರೋ ಕರುಣಾಘನ ನಿಃಶ್ರೇಯಸಸಿದ್ಧಿಮ್ ॥ 4 ॥

# ಮಂಗಳ

ಮಂಗಳಂ ಗುರು ಶ್ರೀ ಚಂದ್ರಮೌಳೀಶ್ವರಗೇ ।
ಶಕ್ತಿಗಣಪತಿ ಶಾರದಾಂಬೆಗೆ ಶಂಕರಾಚಾರ್ಯರಿಗೇ ॥ ಪ ॥

ಕಾಲಭೈರವಗೇ ಕಾಳಿ ದುರ್ಗಿಗೇ ।
ವೀರ ಧೀರ ಶೂರ ಹನುಮ ಮಾರುತಿ ಚರಣಕ್ಕೇ ॥ 1 ॥

ಮಲ್ಲಿಕಾರ್ಜುನಗೇ ಚೆಲ್ವ ಜನಾರ್ದನಗೇ ।
ಅಂಬಾಭವಾನಿ ಕಂಬದ ಗಣಪತಿ ಚಂಡಿಚಾಮುಂಡಿಗೇ ॥ 2 ॥

ವಿದ್ಯಾರಣ್ಯರಿಗೇ ವಿದ್ಯಾಶಂಕರಗೇ ।
ವಾಗೀಶ್ವರಿಗೇ ವಜ್ರದೇಹ ಗರುಡಾಂಜನೇಯರಿಗೇ ॥ 3 ॥

ತುಂಗಭದ್ರೆಗೇ ಶೃಂಗನಿವಾಸಿನಿಗೇ ।
ಶೃಂಗೇರಿಪುರದೊಳು ನೆಲೆಸಿರುವಂಥ ಶಾರದಾಂಬೆಗೇ ॥ 4 ॥

ಸಚ್ಚಿದಾನಂದ ಶಿವ ಅಭಿನವ ನೃಸಿಂಹಭಾರತಿಗೇ
ಚಂದ್ರಶೇಖರಭಾರತೀ ಗುರು ಸಾರ್ವಭೌಮರಿಗೇ
ಚಂದ್ರಶೇಖರಭಾರತೀ ಗುರು ವಿದ್ಯಾತೀರ್ಥರಿಗೇ
ಚಂದ್ರಶೇಖರಭಾರತೀ ಗುರು ಭಾರತೀತೀರ್ಥರಿಗೇ
ಚಂದ್ರಶೇಖರಭಾರತೀ ಗುರು ವಿಧುಶೇಖರಭಾರತಿಗೇ ॥ 5 ॥